# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)

# ಕರ್ನಾಟಕ

ಮಾನ್ಯ ಮಾಧ್ಯಮ ಪ್ರತಿನಿಧಿಗಳೇ, ಹೋರಾಟದ ಶುಭಾಶಯಗಳು. ಕರ್ನಾಟಕದ ಬಿ.ಜೆ.ಪಿ ಸರ್ಕಾರ ಜನರನ್ನು ಒಕ್ಕಲೆಬ್ಬಿಸಿ ಸರ್ವನಾಶ ಮಾಡಲು ಹೊರಟಿರುವುದರ ಕುರಿತು ನಮ್ಮ ಹೇಳಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ಪರಿಗಣಿಸಿ ಪ್ರಕಟಿಸ ಬೇಕೆಂದು ಈ ಮೂಲಕ ಕೋರುತ್ತಿದ್ದೇವೆ.

ಹೋರಾಟದಲ್ಲಿ ತಮ್ಮೊಂದಿಗೆ,

೨೨-೦೪-೨೦೧೦

**ಗಂಗಾಧರ**

**ರಾಜ್ಯ ಸಮಿತಿ ಪರವಾಗಿ**

**ಸಿ.ಪಿ.ಐ( ಮಾವೋವಾದಿ)**

**ಕರ್ನಾಟಕ**

---

ಅರಣ್ಯ ಪ್ರದೇಶಗಳು, ಹಳ್ಳಿಗಳು ಹಾಗೂ ನಗರದ ಕೊಳಚೆ ಎಂದು ಕರೆಸಿಕೊಂಡಿರುವ ಪ್ರದೇಶಗಳಲ್ಲಿ ನೆಲೆಸಿರುವ ಜನರನ್ನು ಆಮಿಷ, ಬೆದರಿಕೆ, ಪೋಲೀಸ್ ಚಿತ್ರಹಿಂಸೆ, ಬಲಾತ್ಕಾರಗಳಿಂದ ಒಕ್ಕಲೆಬ್ಬಿಸುವ ದುಷ್ಟನೀತಿಗಳನ್ನು ರಾಜ್ಯದ ಬಿ.ಜೆ.ಪಿ ಸರ್ಕಾರ ಅನುಸರಿಸುತ್ತಿದೆ. ಮಲೆನಾಡು ಹಾಗೂ ಕರಾವಳಿಯ ಜನರು ಸಮರಶೀಲರಾಗಿ ತೀವ್ರ ಪ್ರತಿರೋಧ ಒಡ್ಡಿನಿಂತಿರುವುದರಿಂದ ಯಾವ ಜನರನ್ನೂ ಬಲಾತ್ಕಾರವಾಗಿ ಒಕ್ಕಲೆಬ್ಬಿಸುವುದಿಲ್ಲ ಎಂದು ಎಲ್ಲಾ ಸರ್ಕಾರಗಳು ಹೇಳುತ್ತಾ ಬಂದಿದ್ದವು. ನೂರಾರು ಕೋಟಿ ರೂಪಾಯಿಗಳ ಹತ್ತು ಹಲವು ಪ್ಯಾಕೇಜ್‌ಗಳನ್ನು ಘೋಷಿಸಿ ಜನರ ಕಣ್ಣಿಗೆ ಮಂಕು ಬೂದಿ ಎರಚುವ ಕೆಲಸಗಳನ್ನು ಮಾಡುತ್ತಾ ಬಂದವು. ಆದರೆ ಈ ಎಲ್ಲಾ ಪ್ಯಾಕೇಜ್‌ಗಳೂ ಜನರನ್ನೇ ಕೈ ಕಾಲು ಕಟ್ಟಿ ಪ್ಯಾಕ್ ಮಾಡಿ ತಮ್ಮ ನೆಲೆಗಳಿಂದಲೇ ಬಿಸುಡುವ ಉದ್ದೇಶಗಳನ್ನು ಹೊಂದಿದ್ದವು ಎಂಬುದು ಈಗ ಸ್ಪಷ್ಟವಾಗಿ ಗೋಚರಿಸತೊಡಗಿವೆ. ಕೇಂದ್ರ ಸರ್ಕಾರ ಘೋಷಿಸಿದ್ದ ಅರಣ್ಯವಾಸಿಗಳಿಗೆ ಶಾಶ್ವತ ದಾಖಲೆ ಒದಗಿಸಿ ಅವರಿರುವಲ್ಲೇ ನೆಲಸುವಂತೆ ಮಾಡುವ ಮಸೂದೆಯೂ ಕೂಡ ಜನರನ್ನು ಮರುಳುಗೊಳಿಸಿ ದಿಕ್ಕು ತಪ್ಪಿಸಿ ತಮ್ಮ ಕಾರ್ಯಸೂಚಿ ಜಾರಿಗೊಳಿಸಲು ಹೂಡಿರುವ ಕುತಂತ್ರ ಎಂಬುದಕ್ಕೆ ಎರಡು ವರ್ಷಗಳು ಕಳೆದರೂ ಆ ಮಸೂದೆ ಇನ್ನೂ ಪ್ರಾಥಮಿಕ ಹಂತದಲ್ಲೂ ಜಾರಿಗೆ ಹೋಗದಿರುವುದಕ್ಕಿಂತ ಬೇರೆ ಸಾಕ್ಷಿ ಬೇಕಾಗಿಲ್ಲ. ಅಭಿವೃದ್ಧಿ ಹೆಸರಿನ ಗಣಿಗಾರಿಕೆಗಳಾಗಲೀ, ವಿಶೇಷ ಆರ್ಥಿಕ ವಲಯಗಳಾಗಲೀ ದಿನೇದಿನೇ ಹೆಚ್ಚುಗೊಳಿಸುತ್ತಿದ್ದಾರೆಯೇ ಹೊರತು ರದ್ದು ಮಾಡುವ ಕಾರ್ಯ ನಡೆಸುತ್ತಿಲ್ಲ. ಜನರ ತೀವ್ರ ಪ್ರತಿಭಟನೆಗಳನ್ನು ಶಮನಗೊಳಿಸಿ ಸಮಯ ಪಡೆದು ದಿಕ್ಕು ತಪ್ಪಿಸಲು ಕೆಲವು ಯೋಜನೆಗಳ ಜಾರಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ ಅಷ್ಟೆ. ಹೆಸರಾಂತ ಸಿಂಗೂರಿನ ರೈತ ಹೋರಾಟಗಾರರಿಗೆ ಟಾಟಾನಿಂದ ಭೂಮಿ ವಶಪಡಿಸಿಕೊಂಡು ಜನರಿಗೆ ಇನ್ನೂ ಹಸ್ತಾಂತರಿಸಲಾಗಿಲ್ಲ. ಅಲ್ಲಿ ಜನಪರ ಪೋಜಿನ ಸಿ.ಪಿ.ಎಂ ನೇತೃತ್ವದ ಎಡರಂಗ ಸರ್ಕಾರ ಆಡಳಿತ ನಡೆಸುತ್ತಿರುವುದು ಎಂಬುದನ್ನು ಗಮನಿಸಬೇಕು. ಹೆಸರಿನಲ್ಲಿ

ದೇಶದ ಅದಿರು ಸಂಪತ್ತನ್ನು, ಭೂಮಿಯನ್ನು ದೇಶೀಯ ಹಾಗೂ ವಿದೇಶಿ ಕಳ್ಳಕಾಕರಿಗೆ ದೋಚಲು ಬಿಡಿಗಾಸಿಗೆ ಅವಕಾಶ ಮಾಡಿಕೊಟ್ಟು ಅಂತಹ ಕಳ್ಳರನ್ನು ಮಂತ್ರಿಗಳನ್ನಾಗಿಯೂ ಮಾಡಿಟ್ಟುಕೊಂಡ 'ಮಹಾನ್ ಪ್ರಜಾಪ್ರಭುತ್ವ 'ದ 'ಘನತೆವೆತ್ತ ' ಸರ್ಕಾರಗಳು ನಮ್ಮ ದೇಶದಲ್ಲಿವೆ. ಕರ್ನಾಟಕದ ಬಿ.ಜೆ.ಪಿ ಸರ್ಕಾರ ಇದರಲ್ಲಿ ಮುಂದಿದೆ ಎಂದು ಹೇಳಿಕೊಳ್ಳಲು ಅದಕ್ಕೆ ಬಹಳ ಹೆಮ್ಮೆ ಅನಿಸುತ್ತಿರಬೇಕು. !

ಇದೀಗ ಬಿ.ಜೆ.ಪಿ ಸರ್ಕಾರ ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಸೋಮೇಶ್ವರ ಅಭಯಾರಣ್ಯ, ಮೂಕಾಂಬಿಕ ರಕ್ಷಿತಾರಣ್ಯ ಪ್ರದೇಶಗಳಲ್ಲಿ ತಲತಲಾಂತರದಿಂದ ನೆಲೆಸಿರುವ ಆದಿವಾಸಿ ಹಾಗೂ ಇತರ ಜನರನ್ನು ಸುಳ್ಳು ಆಮಿಷ, ಬೆದರಿಕೆ, ಪೋಲೀಸ್ ಚಿತ್ರಹಿಂಸೆಗಳ ಮೂಲಕ ಬಲಾತ್ಕಾರವಾಗಿ ಒಕ್ಕಲೆಬ್ಬಿಸಲು ಪ್ರಯತ್ನಿಸುತ್ತಿದೆ. ಗೋಪಾಲ್ ಹೊಸೂರ್ ನೇತೃತ್ವದ ಪೋಲೀಸ್ ಪಡೆ ಹಳ್ಳಿಗಳಲ್ಲಿ ಮನೆಮನೆಗೆ ನುಗ್ಗಿ ಭಯೋತ್ಪಾದನೆ ನಡೆಸುತ್ತಿದೆ. ಸುಳ್ಳು ಕೇಸುಗಳು, ಅಕ್ರಮ ಬಂಧನಗಳು, ಚಿತ್ರಹಿಂಸೆಗಳನ್ನು ನಡೆಸುತ್ತಿದೆ.

ಮಾಧ್ಯಮಗಳಲ್ಲಿ ಅಲ್ಲಿನ ಜನರ ಅಭಿಪ್ರಾಯಗಳನ್ನು, ಹೋರಾಟಗಳನ್ನು ತಿರುಚಿ ಬಿಂಬಿಸಲಾಗುತ್ತಿದೆ. ಸುಳ್ಳು ವರದಿಗಳು, ವಿಕೃತ ಲೇಖನಗಳನ್ನು ಬರೆದು ಪ್ರಕಟಿಸುತ್ತಿವೆ.

ರಾಜ್ಯದ ನಗರ ಪ್ರದೇಶಗಳಲ್ಲಿ ತಲೆಗೊಂದು ಸೂರಿಲ್ಲದೇ ಸರ್ಕಾರಿ ಜಾಗಗಳಲ್ಲಿ ಅಂಗೈಯಗಲದ ಗುಡಿಸಲು ಹಾಕಿ ಕೂಲಿ ನಾಲಿ ಮಾಡಿ ಜೀವನ ನಡೆಸುತ್ತಿರುವ ಅತ್ಯಂತ ಬಡಜನರನ್ನು ರಕ್ಷಿಸಿ, ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಿ, ಸಂರಕ್ಷಿಸಬೇಕಾದ ಸಂವಿಧಾನಿಕ ಕರ್ತವ್ಯ ಹೊಂದಿರುವ ಸರ್ಕಾರವೇ ಹೊಡೆದು ಬಡಿದು ಕಿತ್ತು ಬಿಸುಡುತ್ತಿವೆ. ಅದಕ್ಕೆ ಭೂ ಆಕ್ರಮಣಗಾರರ ತೆರವು ಎಂಬ ತಲೆಬರಹ ಇರುತ್ತದೆ. ಕೆಲವು ಮಾಧ್ಯಮಗಳು ಇದನ್ನೇ ಪ್ರಕಟಿಸುತ್ತವೆ. ಮಂತ್ರಿಮಂಡಲದಲ್ಲಿ, ಸರ್ಕಾರಿ ಯಂತ್ರಾಂಗಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ ಇರುವ ಭಾರಿ ಭೂಕಳ್ಳರ ಭಾರಿ ಭೂಕಬಳಿಕೆಗಳ ಬಗ್ಗೆ ಸರ್ಕಾರದ ಮೌನವನ್ನು ಕೆಲವು ಮಾಧ್ಯಮಗಳೂ ಪಾಲಿಸುತ್ತವೆ.  ನಾಗರಿಕ ಸಮಾಜ ಈ ಬಗ್ಗೆ ತುಟಿ ಎತ್ತುವುದು ಈಗ ಕಡಿಮೆಯಾಗಿದೆ. ಅದೊಂದು ಗಂಭೀರ ಸಮಸ್ಯೆಯೇ ಅಲ್ಲ ಎಂಬಂತಹ ನಿರ್ಲಿಪ್ತತೆ ಈ ನಾಗರೀಕ ಸಮಾಜಕ್ಕೆ ಬಂದು ಬಿಟ್ಟಿದೆ. ಈ ನಿರ್ಲಿಪ್ತತೆಗೆ ಭಾರಿ ಬೆಲೆ ತೆರಬೇಕಾಗುತ್ತದೆ ಎಂಬುದನ್ನು ನಾಗರಿಕ ಸಮಾಜ ಮರೆಯಬಾರದು. ಈ ರೀತಿ ಕಿತ್ತು ಬಿಸುಡುತ್ತಿರುವ ಜನಸಮೂಹ ತಿರುಗಿಬೀಳುವ ದಿನಗಳು ಬಹಳ ದೂರವಿಲ್ಲ. ಆಗ ಅಯ್ಯೋ! ಹಿಂಸೆ! ದೊಂಬಿ! ಕೂಡದು, ಕೂಡದು!  ಶಾಂತಿ, ಶಾಂತಿ ಎಂದು ಬೊಬ್ಬೆ ಹೊಡೆದರೆ ಪೀಡಿತ ಜನರಾರೂ ಕೇಳುವ ಸ್ಥಿತಿಯಲ್ಲಿ ಇರುವುದಿಲ್ಲ. ಹಾಗೆ ಹೇಳುವ ಹಕ್ಕು ಕೂಡ ಆಗ ಪ್ರಶ್ನಾರ್ಹ. ಅವರನ್ನು ಅಂತಹ ಪರಿಸ್ಥಿತಿಗಳಿಗೆ ದೂಡಿರುವುದರಲ್ಲಿ ನಾಗರಿಕ ಸಮಾಜದ ಪಾಲೂ ಕೂಡ ಇರುತ್ತದೆ ಎಂಬುದನ್ನು ಮರೆಯಬಾರದು.  ಬಡಜನರ ಮೇಲೆ  ಹೇರಲ್ಪಡುವ ಕ್ರೂರ ರೀತಿಯ ಹಿಂಸೆ, ದೌರ್ಜನ್ಯ, ಬದುಕಿನ ಅಭದ್ರತೆಗಳಿಂದಾಗಿ ನಾಗರಿಕ ಸಮಾಜ ಹತ್ತು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಯಾವುದೇ ಚಿಂತೆಯಿಲ್ಲದೆ ಸುರಕ್ಷಿತವಾಗಿ ತಮ್ಮಷ್ಟಕ್ಕೆ ತಾವೇ ನೆಮ್ಮದಿಯಿಂದ ಇರಬಹುದೆನ್ನುವ ಮಧ್ಯಮ ವರ್ಗೀಯ ಭ್ರಮೆಗಳು ಕಳಚಿ ಬೀಳುತ್ತವೆ ಎಂಬುದರಲ್ಲಿ ಯಾವುದೇ ಅನುಮಾನ ಇಲ್ಲ. ಈ ಜನರ ಸಮಸ್ಯೆಗಳು ತಮ್ಮ ಸಮಸ್ಯೆಯೂ ಹೌದು ಎಂದು ಗುರ್ತಿಸಿ ಪರಿಹಾರಕ್ಕಾಗಿ ಸಮೂಹಿಕ ಪ್ರಯತ್ನ ನಡೆಸುವ ಜವಾಬ್ದಾರಿ ಹೊತ್ತುಕೊಳ್ಳವುದರಲ್ಲಿ ತಮ್ಮ ಬದುಕಿನ ಭಧ್ರತೆಯ ವಿಚಾರವೂ ಅಡಗಿದೆ ಎಂಬುದನ್ನು ಅರ್ಥ ಮಾಡಿಕೊಂಡು ಕಾರ್ಯ ಪ್ರವೃತ್ತರಾಗಬೇಕು.

ರಾಜ್ಯದ ಕೆಲವು ಪತ್ರಿಕೆಗಳು  ಬಿ.ಜೆ.ಪಿ ಸರ್ಕಾರದೊಂದಿಗೆ ಕೈ ಜೋಡಿಸಿ ಸಾಮಾಜಿಕವಾಗಿ ಆರ್ಥಿಕವಾಗಿ ಅತ್ಯಂತ ಕೆಳಸ್ತರದ ಜನರ ವಿರುದ್ಧ ನಿಂತು ದೇಶಿ ಹಾಗೂ ವಿದೇಶಿ ಕಾರ್ಪೋರೇಟ್‌ಗಳ ದೇಶ ಮುಕ್ಕುವ ಹಿತಾಸಕ್ತಿಗಳನ್ನು ರಕ್ಷಿಸಲು ಹೊರಟಿವೆ. ಈ ಘನಕಾರ್ಯಕ್ಕಾಗಿ ! ಅವರು ಭಕ್ಷೀಸಾಗಿ ಉಗುಳುವ ಎಂಜಲನ್ನು ನೆಕ್ಕುತ್ತಿವೆ. ರಾಜ್ಯದ ಅತ್ಯಂತ ಜನವಿರೋಧಿ ಪತ್ರಿಕೆ 'ವಿಜಯಕರ್ನಾಟಕ ' ಈ ಕಾರ್ಯದಲ್ಲಿ ಮುಂದೆ ನಿಂತಿದೆ. ಈ ಪತ್ರಿಕೆ ಪೀತ ಪತ್ರಿಕೋದ್ಯಮದ ಅತ್ಯಂತ ಹೊಲಸು ತಂತ್ರಗಳನ್ನು ಬಳಸುತ್ತಿದೆ. ಇದು ತನ್ನ ಅಸ್ತಿತ್ವ ಕಂಡುಕೊಂಡಿದ್ದೇ ಕೀಳು ಮಟ್ಟದ ಕಾರ್ಪೋರೇಟ್ ಕುತಂತ್ರಗಳು, ಪೀತ ಕುತಂತ್ರಗಳು ಹಾಗೂ ಕೋಮು ಮಾಫಿಯಾಗಳ ಬಳಕೆಯಿಂದ ಎಂಬುದನ್ನು ಇಲ್ಲಿ ಗಮನಿಸಬೇಕು. ಹಣಕ್ಕಾಗಿ ವರದಿ ಮಾಡುವ, ರಾಜಕೀಯ ಮಾಫಿಯಾಗಳಿಗಾಗಿ ಹಣ ಪಡೆದು ಪರವಾಗಿ ಬರೆಯುವ. ದೇಶದ ಬಹುಸಂಖ್ಯಾತರಾದ ದಲಿತರು, ಆದಿವಾಸಿಗಳು, ಮಹಿಳೆಯರು, ಹಿಂದುಳಿದವರು, ಅಲ್ಪಸಂಖ್ಯಾತರಿಗೆ ತೀವ್ರ ವಿರೋಧಿಯಾಗಿರುವ  ಬ್ರಾಹ್ಮಣವಾದಿ ಸಿದ್ಧಾಂತಗಳನ್ನು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬೇರೆ ಬೇರೆ ವಿಧಾನಗಳಲ್ಲಿ ಜನರಿಗೆ ಉಣಬಡಿಸುವ ಕೆಲಸಗಳನ್ನು ಮಾಡುತ್ತಿದೆ. ಟೈಮ್ಸ್ ಆಫ್ ಇಂಡಿಯಾ ಗುಂಪಿಗೆ ಸೇರಿದ ಈ ಪತ್ರಿಕೆಯಲ್ಲಿ ಬರುವ ಲೇಖನಗಳು ವರದಿಗಳು ಬಹುತೇಕವಾಗಿ ದೇಶದ ಅತ್ಯಂತ ಪ್ರತಿಗಾಮಿ ಜನವಿರೋಧಿ ಉಗ್ರ ಸಂಘಟನೆಯಾದ ಆರ್. ಎಸ್. ಎಸ್ ಥಿಂಕ್ ಟ್ಯಾಂಕ್‌ಗಳ ಮೂಲಕ ಹೊರಬರುತ್ತವೆ ಎಂಬುದು ರಹಸ್ಯವೇನಲ್ಲ. ಅಪ್ಪಟ ಜನವಿರೋಧಿತನಗಳೇ ಈ ಎಲ್ಲಾ ಲೇಖನಗಳ ಉದ್ಧೇಶವಾಗಿರುತ್ತವೆ. ಕೆಲವೊಮ್ಮೆ ಅವುಗಳಲ್ಲಿ ಜನಪರತೆಯ, ಸಾಹಿತ್ಯ ಜಿಜ್ಞಾಸೆಗಳ ಲೇಪನವಿರುತ್ತವೆ. ಒಟ್ಟಿನಲ್ಲಿ ಹೇಳಬೇಕಾದರೆ ದೇಶಿ ಹಾಗೂ ವಿದೇಶಿ ಕಾರ್ಪೋರೇಟ್‌ಗಳ ಹಿತಾಸಕ್ತಿಗಳ ಹಿತರಕ್ಷಣೆಗಾಗಿ ಪೂರ್ಣವಾಗಿ ನಿಂತಿರುವ ರಾಜ್ಯದ ಅತ್ಯಂತ ಪ್ರತಿಗಾಮಿ ಜನವಿರೋಧಿ ಪತ್ರಿಕೆಗಳಲ್ಲಿ ಇದು ಮೊದಲಿಗನಾಗಿದೆ.

ಈ ಪತ್ರಿಕೆಯಲ್ಲಿ ಕೆಲವು ಜನಪರ ಬರಹಗಾರರು, ಪ್ರಜಾತಂತ್ರವಾದಿಗಳು, ಬುದ್ಧಿಜೀವಿಗಳು ಇದರ ಪ್ರತಿಗಾಮಿ ಸ್ವರೂಪ ತಿಳಿದೋ ತಿಳಿಯದೆಯೋ ಆಗಾಗ ಬರೆಯುತ್ತಿದ್ದಾರೆ. ಅದು ಸಂವಾದ, ಚರ್ಚೆ, ವಾಗ್ವಾದಗಳ ಮುಖವಾಡ ತೊಟ್ಟಿರುತ್ತದೆ. ಆ ಮೂಲಕ ಈ ಪತ್ರಿಕೆಗೆ ಅವಶ್ಯಕತೆಯಾಗಿರುವ ಸಾಮಾಜಿಕ ಮನ್ನಣೆ ಗಳಿಸಲು ಸಹಾಯ ಹಾಗೂ ಅವರ ಜನವಿರೋಧಿತನಗಳಿಗೆ ಜನಪರ, ಪ್ರಜಾತಾಂತ್ರಿಕ ಮುಖವಾಡ ಗಳಿಸಲು ತಿಳಿದೋ ತಿಳಿಯದೆಯೋ ಸಹಾಯ ಮಾಡುತ್ತಿದ್ದಾರೆ.

**ರಾಜ್ಯ ಸರ್ಕಾರ ನಡೆಸುತ್ತಿರುವ ಜನರನ್ನು ಒಕ್ಕಲೆಬ್ಬಿಸುವ ಕಾರ್ಯಗಳನ್ನು ಹಾಗೂ ಪೋಲೀಸರ ಮೂಲಕ ನಡೆಸುತ್ತಿರುವ ಜನರ ಮೇಲಿನ ಭಯೋತ್ಪಾದನೆಗಳನ್ನು ಕೂಡಲೇ ನಿಲ್ಲಿಸಬೇಕು.**

**ಜನರ ಮೇಲೆ ದೌರ್ಜನ್ಯ, ಚಿತ್ರಹಿಂಸೆ ಎಸಗುತ್ತಿರುವ ಪೋಲೀಸ್ ಅಧಿಕಾರಿಗಳ ಮೇಲೆ ತೀವ್ರ ಕ್ರಮಗಳನ್ನು ಕೈಗೊಳ್ಳಬೇಕು.**

**ಹಳ್ಳಿ ಹಾಗೂ ನಗರ ಪ್ರದೇಶಗಳಲ್ಲಿ ಬಡಜನರನ್ನು ಬೀದಿಪಾಲು ಮಾಡುವ ಜನವಿರೋಧಿ ಕೆಲಸಗಳನ್ನು ಕೂಡಲೇ ನಿಲ್ಲಿಸಬೇಕು.**

**ಸರ್ಕಾರ ತನ್ನ ಸರ್ಕಾರದೊಳಗೂ ಸೇರಿದಂತೆ ಇರುವ ದೊಡ್ಡ ದೊಡ್ಡ ಭೂಕಳ್ಳರ ಅಕ್ರಮ ಭೂಮಿಗಳನ್ನು ಕೂಡಲೇ ವಶ ಪಡಿಸಿಕೊಂಡು ಅಗತ್ಯವಿರುವ ಜನರಿಗೆ ಹಂಚಿಕೆ ಮಾಡಬೇಕು.**

**ಈಗಾಗಲೇ ತೆರವುಗೊಳಿಸಿ ಬದುಕನ್ನು ವಿನಾಶದತ್ತ ದೂಡಿರುವ ಜನರಿಗೆ ಕೂಡಲೇ ಭೂಮಿ ಸೇರಿದಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಅವರ ಬದುಕಿಗೆ ರಕ್ಷಣೆ ನೀಡಬೇಕು ಎಂದು ನಾವು ಈ ಮೂಲಕ ಬಲವಾಗಿ ಒತ್ತಾಯಿಸುತ್ತಿದ್ದೇವೆ.**

**ಈ ಎಲ್ಲಾ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅದರ ಪರಿಹಾರದ ಭಾಗವಾಗಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ನಾಗರಿಕ ಸಮಾಜವನ್ನು ನಾವು ಕೋರುತ್ತಿದ್ದೇವೆ.**

**ವಿಜಯ ಕರ್ನಾಟಕದಂತಹ ಪ್ರತಿಗಾಮಿ ಜನವಿರೋಧಿ ಪತ್ರಿಕೆಗಳ ಬಗ್ಗೆ ಎಚ್ಚರಿಕೆ ವಹಿಸಿ ಅವುಗಳಿಗೆ ಬರೆಯುವುದನ್ನು ಪ್ರಜಾತಂತ್ರವಾದಿಗಳು, ಜನಪರರು, ಪ್ರಗತಿಪರರು ನಿಲ್ಲಿಸಬೇಕೆಂದು ಅಲ್ಲದೆ ವಿಜಯಕರ್ನಾಟಕದಂತಹ ಪತ್ರಿಕೆಗಳು ಮಾಡುವ ಅಪಾಯಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡುವ ಕೆಲಸಗಳನ್ನು ಮಾಡಬೇಕೆಂದು ನಾವು ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ.**

ಸಮಾಜ ಬದಲಾವಣೆಯ ಹೋರಾಟದ ಶುಭಾಶಯಗಳೊಂದಿಗೆ,

ಗಂಗಾಧರ

ರಾಜ್ಯ ಸಮಿತಿ ಪರವಾಗಿ

೨೨-೦೪-೨೦೧೦ ಸಿ.ಪಿ.ಐ (ಮಾವೋವಾದಿ)

ಕರ್ನಾಟಕ